# ಆ್ಯಕ್ಷನ್‌ನಿಂದ ಕತ್ರೀನಾ ದೂರ ದೂರ

'ಜಿಂದಗಿ ನಾ ಮಿಲೇಗಿ ದುಬಾರ' ಚಿತ್ರದಲ್ಲಿ ಸೆಕ್ಸಿಯಾಗಿ ಕಾಣಿಸಿಕೊಳ್ಳುತ್ತಲೇ ಮೋಟಾರ್‌ಬೈಕ್ ಸ್ಟಂಟ್‌ನಲ್ಲಿ ಕಾಣಿಸಿಕೊಂಡಿದ್ದ ಕತ್ರೀನಾ ಕೈಫ್ ಟೀಕಾಕಾರರು ಹುಬ್ಬೇರಿಸುವಂತೆ ಮಾಡಿದ್ದರು. 'ಏಕ್ ಥಾ ಟೈಗರ್'ನ ಆ್ಯಕ್ಷನ್ ದೃಶ್ಯಗಳಂತೂ ಕ್ಯಾಟ್‌ಗೆ ಬಾಲಿವುಡ್‌ನ ಆ್ಯಕ್ಷನ್ ಕ್ವೀನ್ ಬಿರುದನ್ನೇ ತಂದುಕೊಟ್ಟವು. ನಟನೆಗಿಂತಲೂ ಐಟಂ ಸಾಂಗ್‌ಗೆ ಹೆಜ್ಜೆ ಹಾಕುವುದೇ ಶ್ರೇಷ್ಠ ಎಂದು ಬಾಲಿವುಡ್ ನಾಯಕಿಯರು ನಂಬಿರುವ ಕಾಲದಲ್ಲಿ ಈ ನೀಳ ಕಾಯದ ಸುಂದರಿ ಸಾಹಸಕ್ಕೆ ಮೆಚ್ಚುಗೆಯೂ ವ್ಯಕ್ತವಾಗಿದ್ದವು. ಆದರೆ ಈಗ್ಯಾಕೋ ಆಕೆಗೆ ಆ್ಯಕ್ಷನ್ ಕುರಿತು ವಿರಕ್ತಿ ಬಂದಂತಿದೆ. 'ಧೂಮ್ 3' ಚಿತ್ರದಲ್ಲಿನ ಆ್ಯಕ್ಷನ್ ದೃಶ್ಯಕ್ಕೆ ಕತ್ರೀನಾ ಒಲ್ಲೆ ಎಂದಿದ್ದಾರಂತೆ.

ಚಿತ್ರದಲ್ಲಿನ ಸಾಹಸ ಸನ್ನಿವೇಶಗಳಿಗಾಗಿ ಅಮೀರ್ ಖಾನ್ ಜೊತೆ ಕತ್ರೀನಾ ಕೂಡ ದೇಹವನ್ನು ಸಿದ್ಧಗೊಳಿಸಿಕೊಳ್ಳುತ್ತಿದ್ದಾರೆ. ಸೆಟ್‌ನಲ್ಲಿ ನಿತ್ಯವೂ ಸ್ಟಂಟ್ ಅಭ್ಯಾಸ ನಡೆಸುತ್ತಿದ್ದಾರೆ ಎನ್ನಲಾಗಿತ್ತು. ಆದರೆ ತಮ್ಮ ದೇಹಾರೋಗ್ಯದ ಮೇಲೆ ತುಂಬಾ ಕಾಳಜಿ ಹೊಂದಿರುವ ಕ್ಯಾಟ್ ಒಂದು ಚಿಕ್ಕ ಗಾಯವಾದರೂ ಮುಂದಿನ ಚಿತ್ರಗಳಿಗೆ ತೊಂದರೆಯಾಗುತ್ತದೆ ಎಂಬ ಕಾರಣದಿಂದ ಆ್ಯಕ್ಷನ್‌ನಲ್ಲಿ ಕಾಣಿಸಿಕೊಳ್ಳಲು ಹಿಂದೇಟು ಹಾಕುತ್ತಿದ್ದಾರಂತೆ. ಎಷ್ಟಾದರೂ ಅಭಿನಯಕ್ಕಿಂತ ತೆರೆ ಮೇಲೆ ಸುಂದರವಾಗಿ ಕಾಣಿಸಿಕೊಳ್ಳುವುದಷ್ಟೇ ನಟಿಯರಿಗೆ ಮುಖ್ಯವಲ್ಲವೇ?

■ ಅಮಿ



Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65


